ಸಾಕ್ಷಿಗೆ ದಿನಾಂಕಃ 02.08.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪಿರ್ಯಾದುದಾರರು ಪರ ವಕೀಲರುಃ ಶ್ರೀ ರವರಿಂದ**

ಕಳೆದ ಆರು ವರ್ಷಗಳಿಂದ ಪಿರ್ಯಾದುದಾರರು ನನಗೆ ಪರಿಚಯವಿದೆ. ನಾನು ಪಿರ್ಯಾದುದಾರರ ಮನೆಗೆ ಹೋಗಿ ಬಂದು ಸಹ ಮಾಡುತ್ತಿದ್ದೆ. ಪಿರ್ಯಾದುದಾರರು 4-5 ಹೆಸರಿನಲ್ಲಿ ಸಂಘವನ್ನು ಮಾಡುತ್ತಿದ್ದರು. ಸದರೀ ಸಂಘವನ್ನು ಅವರು ಮನೆಯಲ್ಲಿಯೇ ನಡೆಸುತ್ತಿದ್ದರು. ಪಿರ್ಯಾದುದಾರರು ಸಂಘದ ಪ್ರತಿನಿಧಿಯಾಗಿದ್ದರು. ಸದರೀ ಸಂಘದಲ್ಲಿ ಅಧ್ಯಕ್ಷರು, ನಿರ್ದೇಶಕರು, ಕಾರ್ಯದರ್ಶಿ ಇರಲಿಲ್ಲ. ಸದರೀ ಸಂಘದಲ್ಲಿ ಯಾವುದೇ ಪಾಸ್ ಪುಸ್ತಕವಾಗಲೀ ಗುರುತಿನ ಚೀಟಿಯಾಗಲೀ ನನಗೆ ಕೊಟ್ಟಿರಲಿಲ್ಲ. ನಾನು ಸದರೀ ಸಂಘದಲ್ಲಿ ಒಟ್ಟು ಮೂರು ಬಾರಿ ಸಾಲವನ್ನು 10,000/-, 20,000/- ಮತ್ತು 30,000/- ದಂತೆ ತೆಗೆದುಕೊಂಡಿದ್ದೆ. ಸಾಮಾನ್ಯವಾಗಿ ಸಂಘದಲ್ಲಿ ಸಾಲವನ್ನು ಪಡೆದುಕೊಂಡಾಗ ಪಾಸ್ ಪುಸ್ತಕದಲ್ಲಿ ಸಾಲದ ಮೊತ್ತ ಮರುಪಾವತಿಯ ಅವಧಿ ಮತ್ತು ಕಂತಿನ ಮೊತ್ತ ಹಾಗೂ ಬಾಕಿ ಮೊತ್ತದ ನಮೂದನ್ನು ನಮೂದು ಮಾಡಲಾಗುತ್ತದೆಯೆಂದರೆ ಸಾಕ್ಷಿಯು ನಮಗೆ ಯಾವುದೇ ಪುಸ್ತಕವನ್ನು ಕೊಟ್ಟಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಭದ್ರತೆಗಾಗಿ ಕೊಟ್ಟಿದ್ದ ಚೆಕ್ ನ್ನು ಪಿರ್ಯಾದುದಾರರು ದುರಪಯೋಗಪಡಿಸಿಕೊಂಡಿರುತ್ತಾರೆಂದು ಪೋಲೀಸರಿಗೆ ದೂರು ಕೊಡಲಿಲ್ಲ. ಆದರೆ ದೂರು ಕೊಡಲೆಂದು ಹೋಗಿದ್ದೆ. ನಿ.ಪಿ. 3 ನನಗೆ ಜಾರಿಯಾಗಿರುತ್ತದೆ, ಆದರೆ ಅದಕ್ಕೆ ನಾನು ಮರುತ್ತರವನ್ನು ಕೊಟ್ಟಿರುವುದಿಲ್ಲ. ನಾನು ಹೇಳುವ ರೀತಿ ಪಿರ್ಯಾದುದಾರರು ಯಾವುದೇ ಸಂಘವನ್ನು ನಡೆಸುತ್ತಿರಲಿಲ್ಲ, ಆದಕಾರಣ ನಾನು ಸಂಘದಲ್ಲಿ ಸದಸ್ಯಳಾಗಿರಲಿಲ್ಲ ಎಂದರೆ ಸರಿಯಲ್ಲ. ಹಾಗೂ ಸದರೀ ಸಂಘದಲ್ಲಿ ನಾನು ಯಾವುದೇ ಸಾಲವನ್ನು ತೆಗೆದುಕೊಂಡಿರಲಿಲ್ಲ ಮತ್ತು ಭದ್ರತೆಗಾಗಿ ಯಾವುದೇ ಚೆಕ್ ನ್ನು ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ನಾನು ಪಿರ್ಯಾದುದಾರರಿಂದ ಪಡೆದುಕೊಂಡಿದ್ದ 10 ಲಕ್ಷದ ಮರುಪಾವತಿಗಾಗಿ ನಿ.ಪಿ. 1 ನ್ನು ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಿ.ಪಿ. 1 ನನ್ನ ಬ್ಯಾಂಕ್ ಖಾತೆಗೆ ಸೇರಿದ್ದಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಪಿರ್ಯಾದುದಾರರಿಗೆ ಕೊಡಬೇಕಾಗಿರುವ ಹಣದ ಭಾಧ್ಯಸ್ಥಿಕೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ನಿ.ಪಿ. 1 ನ್ನು ಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪಿರ್ಯಾದುದಾರರು ಲೋಕೇಶ, ಹರೀಶ, ಗಿರೀಶ, ಅರವಿಂದ ಮತ್ತು

ನನ್ನ ವಿರುದ್ದ ಚೆಕ್ ಬೌನ್ಸ್ ಪ್ರಕರಣವನ್ನು ದಾಖಲು ಮಾಡಿರುತ್ತರೆಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸ ಇ ಒ

1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು

ಸಾಕ್ಷಿ ಸಹಿ                    ಜೆ ಎಂ ಎಫ್ ಸಿ, ಮದ್ದೂರು.